MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 26-7-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜುಲೈ 1–25ರ ತನಕ ಮಲೇಶಿಯನ್ ಪಾಮೆಣ್ಣೆ ರಫ್ತು ಜೂನ್‌ಗಿಂತ 11 ಶೇಕಡಾ ಇಳಿಕೆ

ಕಾರ್ಗೋ ಸರ್ವೇಯರ್ಸ್‌ಗಳ ಪ್ರಕಾರ ಜುಲೈ 1–25ರ ತನಕ ಮಲೇಶಿಯನ್ ಪಾಮೆಣ್ಣೆ ರಫ್ತು ಜೂನ್‌ಗಿಂತ 11 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಮಲೇಶ್ಯಾದ ಪಾಮೆಣ್ಣೆ ದಾಸ್ತಾನು 21 ಶೇಕಡಾ ಹೆಚ್ಚಳವಾಗಿ 2 ಮಿಲಿಯನ್ ಟನ್ ಮೀರಬಹುದೆಂದು ಅಂದಾಜಿಸಲಾಗಿದ್ದು, ದುರ್ಬಲ ಬೇಡಿಕೆ, ಉತ್ಪಾದನೆ ಹೆಚ್ಚಳ ಹಾಗೂ ಇಂಡೋನೇಶಿಯಾದಿಂದ ರಫ್ತು ಇತ್ಯಾದಿಗಳಿಂದಾಗಿ ಮಲೇಶ್ಯಾದ ರಫ್ತು ಇಳಿಕೆಯಾಗಿ ದಾಸ್ತಾನು ಹೆಚ್ಚಳವಾಗಿದೆಯೆನ್ನಲಾಗಿದೆ. ಇಂಡೋನೇಶಿಯಾದಲ್ಲೂ ದಾಸ್ತಾನು ಹೆಚ್ಚಳವಿದ್ದು ಆಗಸ್ಟ್ 31 ರ ತನಕ ಸಸ್ಯಜನ್ಯ ತೈಲ ರಫ್ತಿಗೆ ಲೆವಿ ಹಿಂತೆಗೆದಿದ್ದು, ಲೆವಿ ರಹಿತ ರಫ್ತು ಮಾಡಲು ಅವಕಾಶ ನೀಡಿದೆ. ಬೇಡಿಕೆ ಇಳಿಕೆ, ಉತ್ಪಾದನೆ ಹೆಚ್ಚಳದಿಂದ ದರ ಇನ್ನೂ ಇಳಿಕೆಯಾಗುವ ಸಾಧ್ಯತೆಯಿದೆ.

## ಜೋಳ ದರ ಸ್ಥಿರ, ಗೋಧಿ ದರ ಹೆಚ್ಚಳ

ಪ್ರಮುಖ ಮಾರುಕಟ್ಟೆಗಳಲ್ಲಿ ಆವಕ ಹಾಗೂ ಬೇಡಿಕೆ ಸ್ಥಿರತೆಯಿಂದ ಜೋಳ ದರ ಸ್ಥಿರವಿದ್ದು, ಮಿಲ್ಲುಗಳಿಂದ ಬೇಡಿಕೆ ಹೆಚ್ಚಳದಿಂದ ಗೋಧಿ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## ಅಧಿಕ ಮಳೆಯಿಂದ ಮಹಾರಾಷ್ಟ್ರದಲ್ಲಿ ಬೆಳೆಹಾನಿ

ಜುಲೈ ತಿಂಗಳ ಅಧಿಕ ಮಳೆಯಿಂದ ಮಹಾರಾಷ್ಟ್ರದ ಮರಾಠವಾಡ ಹಾಗೂ ವಿದರ್ಭಾ ವಲಯಗಳಲ್ಲಿ ಬೆಳೆಹಾನಿಯಾಗಿದೆಯೆನ್ನಲಾಗಿದೆ. ಭತ್ತ, ಜೋಳ, ಸೋಯಬೀನ್ ಹಾಗೂ ಹತ್ತಿ ಮುಂತಾದ ಬೆಳೆಗಳು ಹಾನಿಗೊಂಡಿವೆಯೆನ್ನಲಾಗಿದೆ. 8 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಖಾರೀಫ್ ಬೆಳೆಯ ನಾಶನಷ್ಟವಾಗಿದೆಯೆನ್ನಲಾಗಿದೆ. ಇದರಲ್ಲಿ ನೆಲಗಡಲೆ, ಕಬ್ಬು ಹಾಗೂ ಅರಸಿನ ಬೆಳೆಗಳೂ ಬಾಧಿತವಾಗಿದೆಯೆನ್ನಲಾಗಿದೆ.

## ಇನ್ನೂ 1 ಮಿಲಿಯನ್ ಟನ್ ಸಕ್ಕರೆ ರಫ್ತಿಗೆ ಅವಕಾಶ ಸಾಧ್ಯತೆ

ಈ ಮೊದಲೇ ಅವಕಾಶ ಕೊಟ್ಟು 10 ಮಿಲಿಯನ್ ಟನ್ ಹೊರತಾಗಿ ಇನ್ನೂ 1ರಿಂದ 1.2 ಮಿಲಿಯನ್ ಟನ್ ಸಕ್ಕರೆ ರಫ್ತಿಗೆ ಸರಕಾರ ಅನುಮತಿ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

## ಭಾರತದ ಅಕ್ಕಿ ರಫ್ತು ದರ ಹೆಚ್ಚಳ

ಈಶಾನ್ಯ ರಾಜ್ಯಗಳಲ್ಲಿ ಭತ್ತ ಬೆಳೆಯುವ ಪ್ರದೇಶ(ಉತ್ತರಪ್ರದೇಶ, ಬಿಹಾರ, ಜಾರ್ಖಂಡ್ ಹಾಗೂ ಪಶ್ಚಿಮಬಂಗಾಲ) ಗಳಲ್ಲಿ ಇಳಿಕೆಯಾಗುತ್ತಿದೆಯೆನ್ನಲಾಗಿದೆ. ಒಟ್ಟು ಭತ್ತ ಬೆಳೆಯುವ ಪ್ರದೇಶಗಳಲ್ಲಿ 11 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಬಿತ್ತನೆ ವಿಳಂಬ, ಮಳೆಯಿಂದ ಬೆಳೆಹಾನಿ ಇತ್ಯಾದಿಗಳಿಂದ ಭಾರತದ ಅಕ್ಕಿ ರಫ್ತು ದರ ಹೆಚ್ಚಳವಾಗಿದೆಯೆನ್ನಲಾಗಿದೆ. ವಿವಿಧ ಕಾರಣಗಳಿಂದ ಖಾರಿಫ್ ಬೆಳೆಯಲ್ಲಿ ಭತ್ತ ಉತ್ಪಾದನೆಯ ವ್ಯತ್ಯಯದ ಗುಮಾನಿಯಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ.